
ತೀರಿಕೊಂಡಾಗ ಹುಡುಗಿ ಮೈನೆರೆಯುವವರೆಗೆ ಕಾದು, ನಂತರ ಹಿರಿಯರೆಲ್ಲ ಸೇರಿ 'ಮಡಿ' ಮಾಡಿಸುತ್ತಾರೆ. ಆಕೆ ಮೈನೆರೆದ ದಿನ 'ಬೆಳಗಿನ ಜಾವಕ್ಕೆ ತೋಟದ ಹಲಸಿನ ಮರದ ಕೆಳಗೆ ಕೂಡಿಸಿ ಸ್ವಲ್ಪ ಉದ್ದವಾಗಿ ಬೆಳೆದಿದ್ದ ಕೂದಲನ್ನು ದಯೆ ದಾಕ್ಷಿಣ್ಯವಿಲ್ಲದೆ ಕರಕರನೇ ಕತ್ತರಿಸಿ ನುಣ್ಣಗೆ ಬೋಳಿಸಿದರು.' ಆ ಸಂದರ್ಭದಲ್ಲಿ ಫಣಿಯಮ್ಮ ಕುರಿಯಂತೆ ತಲೆ ಬಗ್ಗಿಸಿ ಕುಳಿತಿದ್ದಳು. ಗಂಡ ಸತ್ತವರಿಗೆಲ್ಲ ಮಾಡುವಂತೆ ತನಗೂ ಮಾಡುತ್ತಿದ್ದಾರೆ. ಇದರಲ್ಲಿ ಯಾರ ತಪ್ಪು ಸಹಾ ಇಲ್ಲ ಎಂಬ ತಿಳಿವಳಿಕೆ ಅವಳದು. ಆದರೆ ದಾಕ್ಷಾಯಿಣಿ ಹಾಗಲ್ಲ. ಅವಳ ಅತ್ತೆ ಮನೆಯವರು ಗಂಡಸತ್ತ ಹತ್ತನೇ ದಿನವೇ 'ಮಡಿ'ಮಾಡಿಸಲೇಬೇಕೆಂದು ಹಟ ಹಿಡಿದಾಗ ಆಕೆ ಸ್ಪಷ್ಟವಾಗಿ ಅದನ್ನು ನಿರಾಕರಿಸುತ್ತಾಳೆ. 'ನಾನು ಈಗಲೇ ಮಡಿಯಾಗುವುದಿಲ್ಲ. ರಾತ್ರಿ ಹೊತ್ತು ಉಪವಾಸ ಮಾಡೂಕೂ ನನ್ನ ಕೈಲಿ ಕೂಡುಲ್ಲ. ನಾ ಒಲ್ಲೆ' ಎನ್ನುತ್ತಾಳೆ.



ಸಂಪ್ರದಾಯಸ್ಥರಿಗೆಲ್ಲ ಪೀಕಲಾಟಕ್ಕಿಟ್ಟುಕೊಂಡ ಸನ್ನಿವೇಶವದು. ಹುಡುಗಿ ರೂಪವಂತೆ. ಊರವರ ಕಣ್ಣು ಅವಳ ಮೇಲೆ ಬೀಳದೆ ಇರುತ್ತದೆಯೇ. ಹೇಗಾದರೂ ಮಾಡಿ ಕೂದಲು ಬೋಳಿಸಿ, ಒಂದು ವರ್ಷವಾದರೂ ಕತ್ತಲ ಕೋಣೆಯಲ್ಲಿ ಮುಚ್ಚಿಟ್ಟರೆ ಅದೇ ರೂಢಿಯಾಗುತ್ತದೆ. ಈಗ ಕೂದಲು ಬೋಳಿಸಿ ಮಡಿಮಾಡದೆ ಇದ್ದರೆ ಮುಂದೆ ದಾಕ್ಷಾಯಿಣಿ ಬಗ್ಗುತ್ತಾಳೆಯೇ... ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗುವುದಿಲ್ಲವಲ್ಲ ಎಂಬ ಚಿಂತೆ ಹಿರಿಯರದು.

ಮೇಲಾಗಿ ಮನೆಯ 'ಮಡಿ' ಕೆಲಸಕ್ಕೆ ಯಾರಾದರೂ ಬೇಕಲ್ಲ. ಅವಳ ಅತ್ತೆಗೆ ವಯಸ್ಸಾಯ್ತು. ದಿನ ಬೆಳಗಾದರೆ ಹಬ್ಬ- ಹರಿದಿನ, ತಿಥಿ-ಹುಣ್ಣಿಮೆ ಇರುತ್ತದೆ. 'ಮಡಿ' ಕೆಲಸಕ್ಕೆ ಯಾರಾದರೂ ಬೇಕೇಬೇಕು. ವಿಧವೆ ದಾಕ್ಷಾಯಿಣಿಯೇ ಇರುವಾಗ ಆಕೆ 'ಮಡಿಯಾಗುವುದು' ಅನುಕೂಲವೂ ಹೌದು ಎನ್ನುತ್ತಾರೆ ಹಿರಿಯರು. ಆದರೆ ದಾಕ್ಷಾಯಿಣಿ ಮಾತ್ರ ಖಡಕ್ಕಾಗಿ ನಿರಾಕರಿಸುತ್ತಾಳೆ. ಒತ್ತಾಯದ ನಿರುಪಯೋಗಿ ದುಡಿಮೆಗೂ ಅವಳು ಸಿದ್ಧಳಿಲ್ಲ. "ನಾನು ಮಡಿ ಮಾಡಿಸಿಕೊಳ್ಳುವುದಿಲ್ಲ. ಹಂಗೆ ಬಲವಂತ ಮಡಿ ಮಾಡಿಸಿಕೊಂಡರೂ ನಾನವರ ಮನೆಗೆ ಹೋಗುವುದಿಲ್ಲ. ಗಂಡಿಲ್ಲದ ಮೇಲೆ ಅಲ್ಲೇನು ಕೆಲಸ. ಅವರ ಮನೆಯಲ್ಲಿ ಚಾಕ್ರಿ ಬಡೆಯಾಕೇನು ನಾನು ಹುಟ್ಟಿರೋದು. ನಾ ಇಲ್ಲೇ ಇರ್ತನಿ" ಎನ್ನುತ್ತಾಳವಳು.

ಫಣಿಯಮ್ಮ ತನ್ನ ಬಾಳಿನ ದುರಂತವನ್ನು ನೆನೆದು ದಾಕ್ಷಾಯಿಣಿಗೆ, ನೀನು ಸದ್ಯಕ್ಕಂತೂ ಮಡಿಯಾಗುವುದು ಬೇಡ ಎನ್ನುವರು. ಆದರೆ ಉಳಿದವರು ಕೇಳಬೇಕಲ್ಲ. ಕೊನೆಗೂ ಮಡಿಯಾಗುವ ವಿಚಾರದಲ್ಲಿ ದಾಕ್ಷಾಯಿಣಿ ಎಲ್ಲರ ಒತ್ತಡಕ್ಕೆ ಮಣಿಯುತ್ತಾಳೆ. ಅದೂ ಒಂದು ಸವಾಲು ಹಾಕಿಯೇ- "ನಂಗೆ ಮಡಿ ಮಾಡಿಸ್ಲಿ. ಮಾಡ್ತೀನಿ ಅಂತೆ ಇವರಿಗೆಲ್ಲ". ಊರಿನವರಿಗೆಲ್ಲ ದಾಕ್ಷಾಯಿಣಿಗೆ 'ಮಡಿ' ಮಾಡುವುದು ಜಿದ್ದಿನ ಕೆಲಸ. ಗಂಡ ಸತ್ತವಳು 'ಮಡಿ'ಯಾಗದೆ ಹೇಗಿರುತ್ತಾಳೆ ಎಂದು. ಸ್ವರ್ಗ-ನರಕ, ಪಾಪ-ಪುಣ್ಯ ಪುನರ್ಜನ್ಮ ಇತ್ಯಾದಿ ಬೋಧೆಗಳೊಂದಿಗೆ ಊರಿನ 'ಮಡಿ' ಹೆಂಗಸರ ಹತ್ತಿಪ್ಪತ್ತು ಜನರ ಗುಂಪು ಇವಳಿಗೆ 'ಮಡಿ' ಮಾಡಿಸಲೆಂದೆ ಬಂದು ನಿಲ್ಲುತ್ತದೆ. ಆಶ್ಚರ್ಯವಾಗುವಂತೆ ದಾಕ್ಷಾಯಿಣಿ ಒಂಬತ್ತನೇ ದಿನವೇ ಮಾಂಗಲ್ಯ ಕಿತ್ತು ಅರಿಶಿನ ಕುಂಕುಮ ಅಳಿಸಿ ಕೂರುತ್ತಾಳೆ. ನೆರೆದಿದ್ದ ಹೆಂಗಸರಿಗೆ ಅವಳು ಹೇಳುವುದು: 'ನಾಳೆ ಬೆಳಿಗ್ಗೆ ನಾನು ತಲೆ ಬೋಳಿಸ್ಕೋತೇನೆ. ನೀವೆಲ್ಲ ಬಂದು ನಂಗೆ ಆರತಿ ಎತ್ತಿ ತಾಂಬೂಲ ತಗೊಂಡು ಹೋಗಿ. ಸೈಯಾ? ಸಮಾಧಾನ ಆತಲ್ಲ ಈಗ?' ಅವಳ ರೌದ್ರಾವತಾರ ನೋಡಿ ಏನಾದರೂ ಮಾಡಿಕೊಳ್ಳಲಿ ಎಂದು ಊರಿನ ಹೆಂಗಸರು ವಾಪಸಾದರು.

ಆನಂತರ ದಾಕ್ಷಾಯಿಣಿ ಅಳದೆ ಹಟ ಮಾಡದೆ ಮೌನವಾಗಿ ತಲೆ ಬೋಳಿಸಿಕೊಳ್ಳುವಳು. ಕೆಂಪು ಸೀರೆ ಉಟ್ಟು ದೇವರ ಮನೆಯಲ್ಲಿ ಕೂರುವಳು. ಅಲ್ಲಿಗೆ ದಾಕ್ಷಾಯಿಣಿಯ ಪ್ರವಾಹದ ವಿರುದ್ಧದ ಈಜು ನಿಂತಿದೆ ಎಂದರೆ ಹಾಗಾಗದು. ಅದು ತಾತ್ಕಾಲಿಕವಷ್ಟೇ.

ಮಡಿ ಮಾಡಿಸಿಕೊಂಡು ಅತ್ತೆ ಮನೆಗೆ ಹೋಗುವ ದಾಕ್ಷಾಯಿಣಿ ನಂತರದ ಎರಡು ವರ್ಷಗಳಲ್ಲಿ